ಹಾಲಿನ ಬೆಲೆಯ ಬಗ್ಗೆ

3578 - ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಕೇರಳ ರಾಜ್ಯಗಳಲ್ಲಿ 3.5 ಜಿಡ್ಡಿನಂಶದ ಒಂದು ಲೀಟರ್ ಹಾಲಿಗೆ ಆಯಾ ರಾಜ್ಯಗಳ ಡೈರಿ ಸಂಸ್ಥೆಯವರು ಎಷ್ಟು ಹಣ ಕೊಟ್ಟು ರೈತರಿಂದ ಹಾಲನ್ನು ಕೊಂಡುಕೊಳ್ಳುತ್ತಿದ್ದಾರೆ?*

ಆ) *ಇತ್ತೀಚೆಗೆ ರೈತರು ಕೊಂಡುಕೊಳ್ಳುವ ಎಲ್ಲಾ ಪದಾರ್ಥಗಳ ಬೆಲೆಗಳು ಜಾಸ್ತಿಯಾಗಿರುವುದರಿಂದ ರೈತರಿಂದ ಕೊಂಡುಕೊಳ್ಳುವ ಹಾಲಿನ ಬೆಲೆಯನ್ನು ಜಾಸ್ತಿ ಮಾಡಲು ಸರ್ಕಾರ ಆಲೋಚಿಸಿದೆಯೇ?*

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಮತ್ತು ಪಶು ವೈದ್ಯಸೇವಾ ಸಚಿವರು):

ಅ) ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯವರು ಕ್ಷೀರಧಾರ ಯೋಜನೆಯ ಜೂನ್ 91ರ ಮಾಸಿಕ ಪ್ರಗತಿ ವರದಿಯಲ್ಲಿ ನೀಡಿರುವ ಮಾಹಿತಿಯಂತೆ ಈ ರಾಜ್ಯಗಳಲ್ಲಿನ ಹಾಲು ಒಕ್ಕೂಟ ಡೇರಿಗಳಲ್ಲಿರುವ ಹಾಲು ಶೇಖರಣಾ ದರಗಳ ಈ ಕೆಳಕಂಡಂತಿರುತ್ತದೆ:

ರಾಜ್ಯದ ಹೆಸರು	ಹಾಲು ಶೇಖರಣಾ ದರ ಲೀಟರ್‌ಗೆ ರೂ. ಗಳಲ್ಲಿ	
	ಕನಿಷ್ಟ	ಗರಿಷ್ಟ
1) ಆಂಧ್ರ ಪ್ರದೇಶ	3.37	4.54
2) ಮಹಾರಾಷ್ಟ್ರ	3.32	5.22
3) ಪಶ್ಚಿಮ ಬಂಗಾಳ	3.79	4.87
4) ಕೇರಳ	4.46	
5) ಕರ್ನಾಟಕ	3.99 (ದಕ್ಷಿಣ ಜಿಲ್ಲೆಗಳು)	4.42 (ಉತ್ತರ ಜಿಲ್ಲೆಗಳು)

ಆ) ಇಲ್ಲ.

ಅಗಿಲೆಗ್ರಾಮದ ಚೆನ್ನಕೇಶವಸ್ವಾಮಿ ದೇವಸ್ಥಾನ ಕಟ್ಟಡದ ದುರಸ್ತಿ

3671 - ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ): ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ?

ಅ) ಹಾಸನ ಕ್ಷೇತ್ರದ ಅಗಿಲೆ ಗ್ರಾಮದ ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನದ ಕಟ್ಟಡವು ಶಿಥಿಲವಾಗಿದ್ದು, ಬೀಳುವ ಸ್ಥಿತಿಯಲ್ಲಿರುವುದು ನಿಜವೇ?

ಆ) *ಈ ದೇವಸ್ಥಾನದ ತುರ್ತು ರಿಪೇರಿಗೆ ಸರ್ಕಾರ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುವುದೇ?*

ಶ್ರೀ ರಾಜ ಅಮರೇಶ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):

ಅ) ನಿಜ.

ಆ) [illegible] (ಮಾರ್ಚ್ 1990-91ನೇ ಸಾಲಿನಲ್ಲಿ ರೂ.

15,000-00 ಗಳನ್ನು ಬಿಡುಗಡೆ ಮಾಡಲಾಗಿದೆ).

ಹಾಸನ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಹಾನಿ ಆಗಿರುವ ಬಗ್ಗೆ

3576 - ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಗೆ ಇತ್ತೀಚೆಗೆ ಬಿದ್ದ ಧಾರಾಕಾರ ಮಳೆಯಿಂದ ಉಂಟಾದ ಹಾನಿಯೆಷ್ಟು?

ಆ) ವಿವಿಧ ಬೆಳೆಗಳಿಗೆ ಉಂಟಾದ ಹಾನಿಯ ಮೌಲ್ಯವೆಷ್ಟು?

ಇ) ಬಿದ್ದು ಹೋದ ಮನೆಗಳ ಸಂಖ್ಯೆ ಎಷ್ಟು?

ಈ) ಇದುವರೆವಿಗೆ ಸರ್ಕಾರ ಎಷ್ಟು ಪರಿಹಾರ ಹಣ ಒದಗಿಸಿದೆ?

ಉ) ಬೆಳೆ ಹಾಳಾದ ರೈತರಿಗೆ ಪರಿಹಾರ ಕೊಡುವಾಗ, ಸಣ್ಣ, ಅತೀ ಸಣ್ಣ ಮತ್ತು ದೊಡ್ಡ ರೈತರೆಂದು ಪರಿಗಣಿಸಿ ವಿವಿಧ ರೀತಿಯ ಪರಿಹಾರ ಒದಗಿಸುವಂತೆ ಸರ್ಕಾರಿ ಆದೇಶವಿತ್ತಿದೆಯೆ:

ಊ) ಹಾಸನ ಕ್ಷೇತ್ರಕ್ಕೆ ಈ ಬಾಬ್ತು ಎಷ್ಟು ಪರಿಹಾರ ಹಣವನ್ನು ನೊಂದ ಜನರಿಗೆ ಒದಗಿಸಲಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಒಟ್ಟು 126.20 ಲಕ್ಷ ರೂ. ಗಳು

ಆ) ಒಟ್ಟು 104.66 ಲಕ್ಷ ರೂ. ಗಳು

ಇ) 1367 ಮನೆಗಳು.

ಈ) 30.00 ಲಕ್ಷ ರೂ. ಗಳು

ಉ) ಹೌದು

ಊ) 1.93 ಲಕ್ಷ ರೂ.ಗಳು.

ರಾಜ್ಯದಲ್ಲಿ ಖಾಲಿಯಿರುವ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳ ಸಂಖ್ಯೆ

3589 - ಶ್ರೀ ಮಂಜುನಾಥ ಕುನೂರು (ಶಿಗ್ಗಾವಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿಯಿರುವ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಧಾರವಾಡ ಜಿಲ್ಲೆಯಲ್ಲಿ ಖಾಲಿಯಿರುವ ಗ್ರಾಮಲೆಕ್ಕಿಗಳ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಈ ಬಗ್ಗೆ ಮಾನ್ಯ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) 1948 ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇದೆ.

ಆ) 339 ಗ್ರಾಮಲೆಕ್ಕಿಗಳ ಹುದ್ದೆಗಳು ಖಾಲಿ ಇದೆ.

ಇ) ಖಾಲಿ ಇರುವ ಎಲ್ಲಾ ಗ್ರಾಮಲೆಕ್ಕಿಗರ ಹುದ್ದೆಗಳಿಗೆ ಮಿತ ವೇತನ ಪದವೀಧರರನ್ನು ಹಾಗೂ ವಿವಿಧ ಇಲಾಖೆಗಳಲ್ಲಿ ವಿಲೀನ ಹೊಂದಿದ ಮತ್ತು ಹೆಚ್ಚವರಿಯಾದ ದಿನಗೂಲಿ ನೌಕರರನ್ನು ತುಂಬಿಕೊಳ್ಳಲು ಈಗ ಕ್ರಮ ತೆಗೆದು ಕೊಳ್ಳಲಾಗುತ್ತಿದೆ.